(in lakh litres)

Excise year	Production	Issues within the State	Exported outside the State
	(i) Arrack		
1987–88	412.35	412.35	—
1988–89	422.37	422.37	—
1989–90	570.29	570.29	—
1990–91 (July 90 to Oct. 90)	243.65	243.65	—
	(ii) IML		
1987–88	344.42	75.45	260.53
1988–89	379.23	94.68	290.55
1989–90	464.73	166.29	284.91
1990–91	116.12	63.42	46.83(7/90 to 10/90)
	(iii) Beer		
1987–88	426.62	276.95	133.34
1988–89	497.75	331.93	147.38
1989–90	542.14	362.31	159.64
1990–91	129.43	66.66	59.41 (7/90 to 10/90)

Figures are rounded off to the nearest lakh litre. In case of IML and Beer actual consumption may vary when compared to issues including imports. This is due to either accumulation of stock at various levels like distributors, wholesalers and retailers of due to sale of accumulated stock.

ವಿಷಯ :– ಚನ್ನಪಟ್ಟಣದಲ್ಲಿ ಪೋಲೀಸು ಸಿಬ್ಬಂದಿಯ ಹೆಚ್ಚಳ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 813 (953)

ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) :– ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚನ್ನಪಟ್ಟಣದಲ್ಲಿ ಪೋಲೀಸು ಸಿಬ್ಬಂದಿಯನ್ನು ಹೆಚ್ಚಿಸುವ ಪ್ರಸ್ತಾವನೆಯು ಇದುರಪ್ಪದೆಯೇ ?

ಆ) ಹಾಗಿದ್ದಲ್ಲಿ ಯಾವಾಗಿನಿಂದ ಹೆಚ್ಚಿಸಲಾಗುವುದು ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಮಂತ್ರಿಗಳು) :–

ಅ) ಇದೆ.

ಆ) ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ವಿಷಯ :– ಚನ್ನಪಟ್ಟಣದಲ್ಲಿ ಅಗ್ನಿ ಶಾಮಕ ಠಾಣೆಯ ಮಂಜೂರಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 814 (953)

ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) :– ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚನ್ನಪಟ್ಟಣ ನಗರ ಹಾಗೂ ತಾಲ್ಲೂಕಿನಲ್ಲಿ ಪ್ರತಿ ದಿನ ಅಗ್ನಿ ಅನಾಹುತಗಳು ಹೆಚ್ಚುತ್ತಿರುವುದು ಸರ್ಕಾರಕ್ಕೆ ಗೊತ್ತಿದೆಯೇ ? ಹಾಗಿದ್ದಲ್ಲಿ ಅಲ್ಲಿ ಅಗ್ನಿ ಶಾಮಕ ಠಾಣೆಯನ್ನು ಮಂಜೂರು ಮಾಡುವ ಪ್ರಸ್ತಾವನೆ ಇದೆಯೇ ? ಅದನ್ನು ಯಾವಾಗ ಮಂಜೂರು ಮಾಡಲಾಗುವುದು ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಸಚಿವರು) :–

ಅ) ಸರ್ಕಾರದ ಗಮನಕ್ಕೆ ಬಂದಿದೆ. ಇದೆ 1990–91 ನೇ ಆರ್ಥಿಕ ಸಾಲಿನಲ್ಲಿ ಚನ್ನಪಟ್ಟಣ ಹಾಗೂ ರಾಮನಗರಗಳ ನಡುವೆ ಒಂದು ಅಗ್ನಿ ಶಾಮಕ ಠಾಣೆಯನು ಮಂಜೂರು ಮಾಡುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ :– ರಾಜ್ಯದಲ್ಲಿರುವ ಅಕ್ಕಿ ಗಿರಣಿಗಳು ಮತ್ತು ಎಣ್ಣೆ ಗಿರಣಿಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 817 (1001)

ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಕ್ಕಿ ಗಿರಣಿಗಳು ಮತ್ತು ಎಣ್ಣೆ ಗಿರಣಿಗಳು ಎಷ್ಟು ?

ಆ) ಒಟ್ಟು ಮಂಜೂರಾದ ಅಕ್ಕಿ ಗಿರಣಿಗಳ ಮತ್ತು ಎಣ್ಣೆ ಗಿರಣಿಗಳ ಲೈಸೆನ್ಸ್‌ಗಳು ಎಷ್ಟು ?

ಇ) ಸರ್ಕಾರದ ವತಿಯಿಂದ ಹೊಸದಾಗಿ ಅಕ್ಕಿ ಮತ್ತು ಎಣ್ಣೆ ಗಿರಣಿಗಳಿಗೆ ಲೈಸೆನ್ಸ್ ನೀಡಲಾಗುತ್ತಿದೆಯೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :–

ಅ) ಅಕ್ಕಿ ಗಿರಣಿಗಳು 10829, ಎಣ್ಣೆ ಗಿರಣಿಗಳು 372

ಆ) ಅಕ್ಕಿ ಗಿರಣಿಗಳು 10924, ಎಣ್ಣೆ ಗಿರಣಿಗಳು 372.

ಇ) ಹೌದು. ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಜಾರಿಯಲ್ಲಿರುವ ಕಾನೂನು ರೀತಿಯಂತೆ ಪರವಾನಿಗೆಗಳನ್ನು ನೀಡುವ ಅಧಿಕಾರ ಉಳ್ಳವರಾಗಿದ್ದಾರೆ.

ಅಧ್ಯಕ್ಷರು :– ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಇಡಲಾಗಿದೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

1. ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :– ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151 (2) ನೇ ಪರಿಚ್ಛೇದದ ಮೇರೆಗೆ ಭಾರತ ನಿಯಂತ್ರಕ ಹಾಗೂ ಮಹಾಲೇಖಾಪಾಲಕರವರ 31 ನೇ ಮಾರ್ಚ್ 1988ರ ವರೆಗಿನ ಹಣ ವಿನಿಯೋಗ, ವಿತ್ತೀಯ ಲೆಕ್ಕಪತ್ರಗಳ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು :– ಸಭೆಯ ಮುಂದಿಡಲಾಯಿತು.

2) ಶ್ರೀ ಧರ್ಮಸಿಂಗ್ (ಗೃಹ ಮಂತ್ರಿ) :– ಮಾನ್ಯ ಅಧ್ಯಕ್ಷರೆ, 1952ನೇ ಇಸವಿಯ ವಿಚಾರಣಾ ಆಯೋಗದ ಶಾಸನದ 3 (4) ನೇ ಕಲಮಿನ ಮೇರೆಗೆ–

ಅ) ಚಿಂಚೋಳಿಯಲ್ಲಿ ನಡೆದ ಅಶ್ರುವಾಯು ಬಗ್ಗೆ ವಿಚಾರಣಾ ಆಯೋಗದ ವರದಿಯನ್ನು, ಹಾಗೂ

ಆ) ಬೀದರ್‌ನಲ್ಲಿ ನಡೆದ ಹಿಂಸಾತ್ಮಕ ಘಟನೆಗಳ ಬಗ್ಗೆ ವಿಚಾರಣಾ ಆಯೋಗದ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು :– ಸಭೆಯ ಮುಂದಿಡಲಾಯಿತು.

3) ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಹಾಗೂ ನಾಗರೀಕ ಸರಬರಾಜು ಸಚಿವರು) :– ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷಿ ಹಾಗೂ ತೋಟಗಾರಿಕೆ ಸಚಿವರ ಹೆಸರಿನಲ್ಲಿರತಕ್ಕಂಥ 1963 ನೇ ಇಸವಿಯ ಕೃಷಿ ವಿಶ್ವವಿದ್ಯಾನಿಲಯದ 38 (3) ನೇ ಕಲಮಿನ ಮೇರೆಗೆ–